# ಕರ್ನಾಟಕ ವಿಧಾನಸಭೆ

ಬುಧವಾರ 7 ನೇ ಮಾರ್ಚ್ 2001 ದಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11-00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ಎಂ.ವಿ. ವೆಂಕಟಪ್ಪ) ರವರು ಪೀಠವನ್ನು ಅಲಂಕರಿಸಿದ್ದರು.

## 1) ಪ್ರಶ್ನೋತ್ತರಗಳು

### ಅ) ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಶ್ರೀ ಜಗದೀಶ್ ಶೆಟ್ಟರ್: (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೇ, ಗೋವಿನ ಜೋಳದ ಬಗ್ಗೆ ಮೊನ್ನೆ ಪ್ರಸ್ತಾವ ಮಾಡಲಾಗಿದೆ. ಆದರೆ ಇವತ್ತು ಖರೀದಿ ಕೇಂದ್ರಗಳನ್ನು ಬಂದ್ ಮಾಡಿದ್ದಾರೆ. ಧಾರವಾಡದಿಂದ ನನಗೆ ದೂರವಾಣಿ ಬಂದಿತ್ತು.

ಅಧ್ಯಕ್ಷರು:- ಮಾನ್ಯ ಶೆಟ್ಟರ್‌ರವರೆ, ಮೊದಲು ಪ್ರಶ್ನೋತ್ತರ ವೇಳೆ ಮುಗಿಯಲಿ. ಆಮೇಲೆ ರೈಸ್ ಮಾಡಿ. ಅದರ ಬಗ್ಗೆ ನನ್ನದೇನು ಅಬ್ಜೆಕ್ಷನ್ ಇಲ್ಲ.

ಶ್ರೀ ಎಸ್.ಎಸ್. ಪಾಟೀಲ್:- ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಯ ಬಗ್ಗೆ ನಾನು ಕೇಳಬೇಕಾಗಿದೆ. ನಾನು ಪ್ರಶ್ನೆಯನ್ನು ಕನ್ನಡದಲ್ಲಿ ಕಳುಹಿಸಿದ್ದೇನೆ. ಅದನ್ನು ತರ್ಜುಮೆ ಮಾಡಿ ಆಂಗ್ಲಭಾಷೆಯಲ್ಲಿ ಉತ್ತರ ಕೊಡುತ್ತಾರೆ. ಕನ್ನಡದಲ್ಲಿ ಉತ್ತರ ಇಲ್ಲ.

ಅಧ್ಯಕ್ಷರು:- ನಾನು ಅದನ್ನು ವೆರಿಫೈ ಮಾಡುತ್ತೇನೆ. ಅದರ ಬಗ್ಗೆ ಇಲ್ಲಿ ಡಿಸ್‌ಕಷನ್ ಮಾಡುವುದು ಬೇಡ. ಮಾನ್ಯ ಪಾಟೀಲ್‌ರೆ, ನೀವು ನಮ್ಮ ಕೊಠಡಿಗೆ ಬನ್ನಿ. ಪ್ರಶ್ನೆ ಆ ರೀತಿ ಇದೆ ಈ ರೀತಿ ಇದೆಯೆಂದು ಇಲ್ಲಿ ಪ್ರಸ್ತಾಪ ಬೇಡ ಅದರ ಬಗ್ಗೆ ನಮ್ಮ ಕಛೇರಿಯಲ್ಲಿ ಡಿಸ್ಕೆಡ್ ಮಾಡೋಣ. ಇಲ್ಲಿ ಬೇಡ. ಅದರಲ್ಲಿ ಏನಾದರೂ ತಪ್ಪುಗಳು ಇದ್ದರೆ ಅದನ್ನು ಅಲ್ಲಿ ಚರ್ಚೆ ಮಾಡೋಣ.

ಶ್ರೀ ಎಸ್.ಎಸ್. ಪಾಟೀಲ್:- ನಾನು ಕನ್ನಡದಲ್ಲಿ ಪ್ರಶ್ನೆ ಕೇಳಿದರೆ ಆಂಗ್ಲಭಾಷೆಯಲ್ಲಿ ಉತ್ತರ ಕೊಟ್ಟರೆ ಹೇಗೆ?

ಅಧ್ಯಕ್ಷರು:- ಉತ್ತರವನ್ನು ಕನ್ನಡದಲ್ಲಿ ಕೊಡಿಸುತ್ತೇನೆ, ತಾವು ಕುಳಿತುಕೊಳ್ಳಿ.

### ಸಮುದಾಯ ಆರೋಗ್ಯ ಮಾರ್ಗದರ್ಶಿಗಳು

76 (1102) ಶ್ರೀ ಗುರುಪಾದಗೌಡ ಸಂಗನಗೌಡ ಪಾಟೀಲ್ (ರೋಣ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ರಾಜ್ಯದ ಆರೋಗ್ಯ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಆರೋಗ್ಯ ಸಮುದಾಯ ಮಾರ್ಗದರ್ಶಿಗಳ ಸಂಖ್ಯೆ ಎಷ್ಟು?

ಆ) ಸಮುದಾಯ ಆರೋಗ್ಯ ಮಾರ್ಗದರ್ಶಿಗಳಿಗೆ ನೀಡುತ್ತಿರುವ ಗೌರವಧನವೆಷ್ಟು?

ಇ) ಗೌರವಧನ ಹೆಚ್ಚಿಸುವ ಪ್ರಸ್ತಾವ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಡಾ॥ ಎ. ಬಿ. ಮಾಲಕ ರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) 7821

ಆ) ಮಾಸಿಕ 50 ರೂ. ಗಳು

ಇ) ಕೇಂದ್ರ ಪುರಸ್ಕೃತ ಯೋಜನೆಯಾಗಿರುವುದರಂದ ರಾಜ್ಯದಲ್ಲಿ ಗೌರವಧನ ಹೆಚ್ಚಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಗುರುಪಾದಪ್ಪ ಸಂಗನಗೌಡ ಪಾಟೀಲ್:- ಸನ್ಮಾನ್ಯ ಅಧ್ಯಕ್ಷರೇ, ರಾಜ್ಯದ ಆರೋಗ್ಯ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಆರೋಗ್ಯ ಸಮುದಾಯ ಮಾರ್ಗದರ್ಶಿಗಳ ಸಂಖ್ಯೆ ಎಷ್ಟು ಎಂದು ಮಾನ್ಯ ಆರೋಗ್ಯ ಸಚಿವರನ್ನು ಕೇಳಿದ್ದಕ್ಕೆ '7821' ಎನ್ನುವ ಉತ್ತರ ಕೊಟ್ಟಿದ್ದಾರೆ. ಅವರಿಗೆ ಮಾಸಿಕ 50 ರೂಪಾಯಿ ಗೌರವಧನ ಕೊಡಲಾಗುತ್ತಿದೆ ಎನ್ನುವ ಮಾತನ್ನು ಕೂಡ ಹೇಳಿದ್ದಾರೆ. ಇದನ್ನು ಹೆಚ್ಚಿಸುವ ಪ್ರಸ್ತಾವ ಪರಿಶೀಲನೆಯಲ್ಲಿದೆಯೇ ಎಂದು ಕೇಳಿದ್ದಕ್ಕೆ 'ಈ ವಿಚಾರ ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ' ಎನ್ನುವ ಮಾತನ್ನು ಕೂಡ ಹೇಳಿದ್ದಾರೆ. ಆದರೆ ಮಾನ್ಯ ಅಧ್ಯಕ್ಷರೇ, ಈ ಸಮುದಾಯ ಆರೋಗ್ಯ ಮಾರ್ಗದರ್ಶಿಗಳನ್ನು 1979ನೇ ಇಸವಿಯಲ್ಲಿ ನೇಮಕ ಮಾಡಿದ್ದಾರೆ. ಅಲ್ಲಿಂದ ಇಲ್ಲಿಯವರೆಗೆ ಆರೋಗ್ಯ ಇಲಾಖೆಯ ಅನೇಕ ಕಾರ್ಯಕ್ರಮಗಳಲ್ಲಿ, ಅದು ಪೋಲಿಯೊ ಇರಬಹುದು, ಕುಟುಂಬ ಕಲ್ಯಾಣ ಯೋಜನೆ ಕಾರ್ಯಕ್ರಮಗಳಲ್ಲಿ, ಅದು ಪೋಲಿಯೋ ಇರಬಹುದು, ಕುಟುಂಬ ಕಲ್ಯಾಣ ಯೋಜನೆ ಕಾರ್ಯಕ್ರಮವಲ್ಲದೆ, ಇನ್ನೂ ಅನೇಕ ಕಾರ್ಯಕ್ರಮಗಳಲ್ಲಿ ಅವರನ್ನು ತೊಡಗಿಸಿಕೊಂಡಿದ್ದಾರೆ. ಅದಕ್ಕೆ ಅವರಿಗೆ ಕೊಡತಕ್ಕಂಥ, ಗೌರವಧನ ಏನಿದೆ ಅದು ಬಹಳ ಕಡಿಮೆಯಾಗಿದೆ. ಆದ್ದರಿಂದ ಇದರ ಬಗ್ಗೆ ಸರ್ಕಾರ ತೀವ್ರ ಗಮನಹರಿಸಬೇಕು ಮತ್ತು ಇದರ ಜೊತೆಗೆ 1996ರವರೆಗೆ ಮೆಡಿಕಲ್ ಕಿಟ್ಸ್ ಕೂಡ ಕೊಡುತ್ತಿದ್ದರು, ಯಾವುದೇ ಹೊಸ ಕಾರ್ಯಕ್ರಮ ತೆಗೆದುಕೊಂಡರೆ ಇದನ್ನು ಉಪಯೋಗ ಮಾಡಿಕೊಳ್ಳಬಹುದು ಎನ್ನುವ ಉದ್ದೇಶದಿಂದ ಈ ವ್ಯವಸ್ಥೆಯನ್ನು ಕೂಡ ನಂತರ ಮೊಟಕುಗೊಳಿಸಿದ್ದಾರೆ. ಆದ್ದರಿಂದ ನಾನು ತಮ್ಮ ಮೂಲಕ ಮಾನ್ಯ ಆರೋಗ್ಯ ಸಚಿವರಲ್ಲಿ ಈ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಮುಂದೆ ಬರಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಡಾ॥ ಎ. ಬಿ. ಮಾಲಕರೆಡ್ಡಿ:- ಸನ್ಮಾನ್ಯ ಅಧ್ಯಕ್ಷರೇ, 1980 ನೇ ಇಸವಿಯಲ್ಲಿ ಈ ಕಾರ್ಯಕ್ರಮ ಜಾರಿಗೆ ಬಂತು. 1980 ನೇ ಇಸವಿಯಲ್ಲಿ ಮಾನ್ಯ ರಾಜನಾರಾಯಣ್ ಅವರು ಕೇಂದ್ರದಲ್ಲಿ ಆರೋಗ್ಯ ಸಚಿವರಾಗಿದ್ದಾಗ ಚೈನಾದೇಶದಲ್ಲಿ 'ಬೇರ್‌ಫುಟ್ ಡಾಕ್ಟರ್ಸ್' ಎನ್ನುವ ಯೋಜನೆ, ಏನು ಜಾರಿಯಲ್ಲಿತ್ತು, ಅದೇ ರೀತಿಯಲ್ಲಿ ನಮ್ಮ ದೇಶದಲ್ಲಿ ಸಮುದಾಯ ಆರೋಗ್ಯ ಮಾರ್ಗದರ್ಶಿ ಹೆಸರಿನಿಂದ ಈ ಕಾರ್ಯಕ್ರಮ ಜಾರಿಗೆ ಬಂತು. ಈಗ 1981 ನೇ, ಇಸವಿಯಿಂದ ಇದು ಸಂಪೂರ್ಣವಾಗಿ ಕೇಂದ್ರಪುರಸ್ಕೃತ ಕಾರ್ಯಕ್ರಮವಾಗಿದೆ. ಆರೋಗ್ಯ ಮಾರ್ಗದರ್ಶಿಗಳು 7ನೇ ತರಗತಿಯಲ್ಲಿ ಪಾಸಾಗಿದ್ದರೆ ಸಾಕು ಎಂದು ನಾರ್ಮ್ಸ್ ಇದೆ, ಇವರಿಗೆ ಆರು ತಿಂಗಳು ತರಬೇತಿ ಕೊಟ್ಟು ಗ್ರಾಮಾಂತರ ಪ್ರದೇಶಗಳಲ್ಲಿ ಒಂದು ಸಾವಿರ ಜನಸಂಖ್ಯೆಗೆ ಒಬ್ಬರು ಮಾರ್ಗದರ್ಶನ ಮಾಡಬೇಕು ಮತ್ತು ಆರೋಗ್ಯಕ್ಕೆ ಸಂಬಂಧಪಟ್ಟಂಥ ವಿಷಯದಲ್ಲಿ ಸಹಾಯ ಮಾಡಬೇಕು ಎಂದು ಇದೆ. ಇವರಿಗೆ ಕೆಲವು ಔಷಧಿಗಳನ್ನು ಕೊಟ್ಟು, ತರಬೇತಿ

ಕೊಟ್ಟು ಈ ವ್ಯವಸ್ಥೆಯನ್ನು ಮಾಡಲಾಗಿದೆ. ಆದರೆ ಮುಂದೆ ಇವರು ತಮ್ಮ ಉದ್ಯೋಗವನ್ನು ಕಾಯಂ ಮಾಡಬೇಕೆಂದು ಕೋರ್ಟಿಗೆ ಹೋದರು. ಇದರಿಂದ ತಮ್ಮ ಕಲಮೇಲೆ ಕಲ್ಲನ್ನು ತಾವೇ ಹಾಕಿಕೊಂಡರು. ಕೇಂದ್ರ ಸರ್ಕಾರದವರು ಜಾಗ್ರತರಾಗಿ ಇವರು ಈ ರೀತಿ ಶಾಶ್ವತ ನೇಮಕಾತಿ ಮಾಡಬೇಕೆಂದು ಹೇಳಿ ಚಳುವಳಿ ಮಾಡುತ್ತಿದ್ದಾರೆಂದು ಹೇಳಿದಾಗ ಇದರ ಪುನರ್ ವಿಮರ್ಶೆ ಯಾಯಿತು. ಈ ಕಾರ್ಯಕ್ರಮವನ್ನು ಎಲ್ಲ ಜಿಲ್ಲೆಗಳಲ್ಲೂ ಹಾಕಿಕೊಂಡಿಲ್ಲ. ಕೆಲವು ಜಿಲ್ಲೆಗಳಲ್ಲಿ ಮಾತ್ರ ಇದು ಅನುಷ್ಠಾನಕ್ಕೆ ಬಂದಿದೆ. ಇತ್ತೀಚಿನ ವರ್ಷಗಳಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಜನರ ಆರೋಗ್ಯ ಕಾಯ್ದುಕೊಳ್ಳಲು ಅಥವಾ ಮಾರ್ಗದರ್ಶನ ಮಾಡುವುದಕ್ಕೆ ಸರ್ಕಾರ ಸಾಕಷ್ಟು ವ್ಯವಸ್ಥೆಯನ್ನು ಮಾಡಿದೆ. ಆ ವ್ಯವಸ್ಥೆ ಹೀಗಿದೆ. ಈಗ ಗ್ರಾಮಾಂತರ ಪ್ರದೇಶಗಳಲ್ಲಿ ಕೆಲಸ ಮಾಡುವುದಕ್ಕೆ 8 ಸಾವಿರ ಕಿರಿಯ ಮಹಿಳಾ ಆರೋಗ್ಯ ಸಹಾಯಕರು ಇದ್ದಾರೆ ಮತ್ತು 5 ಸಾವಿರ ಪುರುಷ ಆರೋಗ್ಯ ಸಹಾಯಕರು ಇದ್ದಾರೆ. 5 ಸಾವಿರ ಸಹಾಯಕರ ಮೂಲಕ ಜ್ವರ ಮುಂತಾದ ಚಿಕಿತ್ಸೆಗೆ ಔಷಧಿ ವಿತರಣೆಗೆ ವ್ಯವಸ್ಥೆ ಇದೆ. ಈ ಮತ್ತು 14 ಸಾವಿರ ಮಹಿಳಾ ಸ್ವಾಸ್ಥ್ಯ ಸಂಸ್ಥೆಗಳು ಹಾಗೂ 27 ಸಾವಿರ ಸಾಂಪ್ರದಾಯಿಕ ದಾದಿಗಳಿಗೆ ತರಬೇತಿ ಕೊಡುವ ವ್ಯವಸ್ಥೆಯನ್ನು ಕೂಡ ಮಾಡಲಾಗಿದೆ. ಆಮೇಲೆ 35 ಸಾವಿರ ಅಂಗನವಾಡಿ ಕಾರ್ಯಕರ್ತರು ಕೂಡ ಇದ್ದು ಆರೋಗ್ಯ ಇಲಾಖೆಯಲ್ಲಿ ಇಷ್ಟೊಂದು ಪ್ರಮಾಣದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಜನರ ಆರೋಗ್ಯ ಮೇಲ್ವಿಚಾರಣೆ ಮಾಡುವುದಕ್ಕೆಂದು ಇದ್ದಾರೆ. ಇವರಿಗೆ ಔಷಧಿ ಕೂಡ ಕೊಡಲಾಗಿದೆ. ಆದ್ದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ವಾಸ ಮಾಡತಕ್ಕಂಥ ಜನರಿಗೆ ಅನಾನುಕೂಲವಾಗಿದೆಯೆಂದು ನಾನು ತಿಳಿದು ಕೊಂಡಿಲ್ಲ.

ಶ್ರೀ ಜಿ.ಎಸ್.ಪಾಟೀಲ್:- ಬಹಳಷ್ಟು ಸರ್ಕಾರಿ ಆಸ್ಪತ್ರೆಗಳಲ್ಲಿ ಅನೇಕ ಹುದ್ದೆಗಳು ಖಾಲಿ ಇವೆ. ಇಂತಹ ಹುದ್ದೆಗಳಿಗೆ ಇವರನ್ನು ಏಕೆ ಸರ್ಕಾರ ತೆಗೆದುಕೊಳ್ಳಬಾರದು?

ಡಾ|| ಎ.ಬಿ. ಮಾಲಕರೆಡ್ಡಿ:- ಯಾರನ್ನೂ ನೇಮಕ ಮಾಡುತ್ತಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳ ಉದಾರ ನೀತಿಯನ್ನು ಅನುಸರಿಸಿ 'ಆರೋಗ್ಯಭಾಗ್ಯ'ದಲ್ಲಿ ಈ ತಜ್ಞರುಗಳ ನೇಮಕಾತಿಗೆ ಮಾತ್ರ ಅನುಮತಿ ಕೊಟ್ಟಿದ್ದಾರೆ. ತಜ್ಞರು ಅಲ್ಲದವರ ನೇಮಕಕ್ಕೆ ಸರ್ಕಾರದ ಜನರಲ್ ಪಾಲಿಸಿಯಲ್ಲಿ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಕೆ.ಬಿ. ಕೋಳಿವಾಡ:- ಅವರಿಗೆ ಒಂದು ತಿಂಗಳಿಗೆ 50 ರೂಪಾಯಿ ಗೌರವಧನ ಎಂದರೆ ಇದು ಯಾರೂ ಕೂಡ ಸಹನೆ ಮಾಡಲು ಸಾಧ್ಯವಿಲ್ಲ. ಅವರಿಂದ ತಿಂಗಳೆಲ್ಲ ದುಡಿಸಿ ಕೊಂಡು ತಿಂಗಳಿಗೆ 50 ರೂಪಾಯಿ ಕೊಡುವುದು ಸರಿಕಾಣುವುದಿಲ್ಲ. ಎಲ್ಲೆಲ್ಲಿ ನಾಲ್ಕನೇ ದರ್ಜೆ ನೌಕರರು ಬೇಕಾಗುತ್ತಾರೆ ಅಲ್ಲಿ ಇವರನ್ನು ಅಬ್ಸರ್ವ್ ಮಾಡುವುದಕ್ಕೆ ಸರ್ಕಾರ ಚಿಂತನೆ ಮಾಡುತ್ತದೆಯೇ ಎಂದು ಹೇಳಬೇಕು.

ಡಾ|| ಎ.ಬಿ. ಮಾಲಕರೆಡ್ಡಿ:- ಇದು ಸಂಪೂರ್ಣವಾಗಿ ಕೇಂದ್ರಪುರಸ್ಕೃತ ಯೋಜನೆ. ಕೇಂದ್ರಸರ್ಕಾರದವರು ಏನಾದರೂ ನಿರ್ಣಯ ತೆಗೆದುಕೊಂಡು ರಾಜ್ಯ ಸರ್ಕಾರಕ್ಕೆ ಮಾರ್ಗದರ್ಶನ ಮಾಡಿದರೆ ಆಮೇಲೆ ನೋಡಬಹುದು. ಆದರೆ ಇವರುಗಳಿಗೆ ಯಾವುದೇ ರೀತಿಯ ಜವಾಬ್ದಾರಿ ಇಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಈಗಾಗಲೇ ಮಾನ್ಯ ಮಂತ್ರಿಗಳು ಹೇಳಿದಂತೆ ಇದು ಕೇಂದ್ರ ಪುರಸ್ಕೃತ ಯೋಜನೆ. ಆದರೆ ಇವರು ನಮ್ಮ ರಾಜ್ಯದವರೇ. ನಮ್ಮ ರಾಜ್ಯಸರ್ಕಾರವೂ ಸ್ವಲ್ಪಮಟ್ಟಿಗೆ ಏನಾದರೂ ಅವರಿಗೆ ಸಹಾಯ ಮಾಡಿದರೆ, ಹೆಚ್ಚು ಗೌರವಧನ ಕೊಟ್ಟರೆ ಅವರ ಜೀವನಕ್ಕೆ

ಅನುಕೂಲವಾಗುತ್ತದೆ. ಇಲ್ಲವೆಂದರೆ ಹೆಸರಿಗೆ ಅವರು ಸಮುದಾಯ ಮಾರ್ಗದರ್ಶಿಗಳೆಂದು ಹೇಳಿ, 50 ರೂಪಾಯಿ ಏನು ತಿಂಗಳಿಗೆ ಕೊಡುತ್ತಿದ್ದಾರೆ, ಇದು ಯಾವ ಮಾನವೀಯತೆ? ಅಧ್ಯಕ್ಷರೇ, ನೀವೇ ಹೇಳಿ. ಹಾಗಾಗಿ ರಾಜ್ಯಸರ್ಕಾರ ಯಾವುದಾದರೂ ಒಂದು ರೀತಿಯಲ್ಲಿ ಅವರಿಗೆ ಗೌರವಧನ ಹೆಚ್ಚಿಸುವುದಕ್ಕೆ ಬೇಕಾಗಿರತಕ್ಕಂಥ ಕ್ರಮ ತೆಗೆದುಕೊಳ್ಳಬೇಕು. ಇವರದ್ದೇ ನಿಧಿ ಇದೆ. ಇವರ ನಿಧಿಯಿಂದ ಅವರಿಗೆ ಕೊಡಲಿ. ಅದನ್ನು ಕೊಡುವುದಕ್ಕೆ ಇರುವ ತೊಂದರೆ ಏನು?

ಡಾ॥ ಎ.ಬಿ. ಮಾಲಕರೆಡ್ಡಿ:- ಆರೋಗ್ಯ ಮಾರ್ಗದರ್ಶಿಗಳಿಗೆ ಏನು ಕೆಲಸ ಇತ್ತು, ಆ ಕೆಲಸವನ್ನು ಉಳಿದ ಸಿಬ್ಬಂದಿಯವರು ಮಾಡುತ್ತಿದ್ದಾರೆ. ಇವರಿಗೆ ಈಗ ವಿಶೇಷವಾದ ಜವಾಬ್ದಾರಿ ಏನೂ ಕೊಟ್ಟಿಲ್ಲ; ಇದು ಕೇಂದ್ರಸರ್ಕಾರ ಪುರಷ್ಕೃತ ಯೋಜನೆಯಾಗಿರುವುದರಿಂದ ಕೇಂದ್ರಸರ್ಕಾರದಿಂದ, ತಿಂಗಳಿಗೆ 50 ರೂಪಾಯಿ ಏನು ಬರುತ್ತದೆ ಅದನ್ನು ರಾಜ್ಯಸರ್ಕಾರ ಕೊಡುತ್ತದೆ. ಅವರಿಗೆ ವಿಶೇಷವಾದ ಯಾವುದೇ ಕಾರ್ಯಕ್ರಮವನ್ನು ಕೊಟ್ಟಿಲ್ಲ, ಜವಾಬ್ದಾರಿಯನ್ನೂ ಕೊಟ್ಟಿಲ್ಲ.

**ಸೇಡಂ ತಾಲ್ಲೂಕಿನ ಕುಡಿಯುವ ನೀರಿನ ಯೋಜನೆಗಾಗಿ 60 ಲಕ್ಷ ರೂಗಳ ಮಂಜುರಾತಿ**

77(975) ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ):- ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಕುಡಿಯುವ ನೀರಿನ ಯೋಜನೆಗಾಗಿ 2000-01ನೇ ಸಾಲಿಗಾಗಿ ರೂ. 60. ಲಕ್ಷ ಮಂಜೂರಾಗಿರುವ ಗ್ರಾಮಗಳು ಯಾವುವು?

ಆ) ಯಾವ ಯಾವ ಗ್ರಾಮಗಳಲ್ಲಿ ಯಾವ ಯಾವ ಕೆಲಸಗಳನ್ನು ಕೈಗೊಳ್ಳಲಾಗಿದೆ; ಆಯಾ ಗ್ರಾಮದ ಕೆಲಸಗಳ ವಿವರ ಅದಕ್ಕೆ ತಗಲುವ ಖರ್ಚಿನ ವಿವರ; ಮತ್ತು ಇವುಗಳ ನಿರ್ವಹಣೆಗಾಗಿ ಒಪ್ಪಿಸಿರುವ ಇಲಾಖೆಗಳು ಯಾವುವು?

ಇ) ಮಂಜೂರಾಗಿರುವ ಹಣದಿಂದ ಬೇಸಿಗೆ ಕಾಲದವರೆಗೆ ಕೆಲಸ ಮಾಡದೇ ಇರುವುದರಿಂದ ಗ್ರಾಮಾಂತರ ನಾಗರೀಕರಿಗೆ ಕುಡಿಯುವ ನೀರಿನ ಸಮಸ್ಯೆಯಾಗುವುದಿಲ್ಲವೆ? ಹಣ ಮಂಜೂರಿಯಾಗಿದ್ದರೂ ಪ್ರಯೋಜನೆ ಇಲ್ಲದಂತಾಗುವುದಿಲ್ಲವೆ?

ಈ) ರೂ. 60 ಲಕ್ಷ ಯೋಜನೆಯಲ್ಲಿ ಕೂಡಲೇ ಕೆಲಸಗಳನ್ನು ಪೂರ್ತಿ ಮಾಡದಿದ್ದರೆ ಬೇಸಿಗೆಯಲ್ಲಿ ತಾತ್ಪರ್ತಿಕ ನೀರು ಸರಬರಾಜು ವ್ಯವಸ್ಥೆ ಮಾಡಬಹುದೆ?

ಶ್ರೀ ಎಂ.ವೈ. ಘೋರ್ಪಡೆ ( ಗ್ರಾಮೀಣಾಭಿವೃದ್ಧಿಪಂಚಾಯತ್ ರಾಜ್ ಸಚಿವರು):-

ಅ) ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

ಇ) ರೂ. 60 ಲಕ್ಷಗಳ ಹೆಚ್ಚುವರಿ ಅನುದಾನದ ಪೈಕಿ ಶೇಕಡ 50 ರಷ್ಟು ಅನುದಾನ ಅಂದರೆ ರೂ30. ಲಕ್ಷಗಳು ಬಿಡುಗಡೆಯಾಗಿದ್ದು 5 ಕಾಮಗಾರಿಗಳು ಪ್ರಗತಿಯಲ್ಲಿವೆ. ಇನ್ನುಳಿದ ಕಾಮಗಾರಿಗಳನ್ನು 2001-02 ನೇ ಸಾಲಿನಲ್ಲಿ ಕಾರ್ಯಗತಗೊಳಿಸಲು ಉದ್ದೇಶಿಸಿವೆ.